**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-**

ವಾದಿ ಪ್ರತಿವಾದಿಯರ ವಿರುದ್ಧ ಏನು ಪ್ರಕರಣ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿನಲ್ಲಿ ಭಾಗ ಬರಬೇಕು ಎಂದು ಈ ದಾವೆ ಹಾಕಿರುತ್ತಾರೆ. 5 ನೇ ಪ್ರತಿವಾದಿ ಪರ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ. ನಾನು ಕೆ.ಎಸ್.ಆರ್.ಟಿ.ಸಿ ಡಿವಿಜನಲ್ ಮ್ಯಾಕ್ಯಾನಿಕಲ್ ಇಂಜಿನಿಯರ್ ಆಗಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತೇನೆ. 5 ನೇ ಪ್ರತಿವಾದಿ ಡಿ.ಎಂ. ಸೌಭಾಗ್ಯ ರವರು ಹೆಚ್ಚು ಕಡಿಮೆ ನನ್ನ ವಯಸ್ಸಿವರು ಎಂದರೆ ಸಾಕ್ಷಿ ನನಗಿಂತ 3 ವರ್ಷ ದೊಡ್ಡವರು ಎನ್ನುತ್ತಾರೆ. ಅವರು ಆರೋಗ್ಯವಾಗಿ ಚೆನ್ನಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಮಕ್ಕಳ ಬಳಿ ಆಸ್ಟ್ರೇಲಿಯಾದಲ್ಲಿ ಇರುತ್ತಾರೆ. ಅವರ ಆರೋಗ್ಯ ಸರಿ ಇಲ್ಲವೆಂದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅವರು ಮೊದಲು ವಿದೇಶದಲ್ಲಿ ಇದ್ದು, ಜಿ.ಪಿ.ಎ ಕೊಟ್ಟ ನಂತರ ಅವರು ಮೈಸೂರಿನಲ್ಲೆ ಇದ್ದಾರೆ ಎಂದರೆ ಸರಿ. ಸಾಕ್ಷಿ ಪುನಃ ಮೊಮ್ಮಕ್ಕಳು ಇದ್ದಾರೆ ಎಂದು ಪುನಃ ವಿದೇಶಕ್ಕೆ ಹೋಗುತ್ತಾರೆ ಎನ್ನುತ್ತಾರೆ. ಈಗ ಪ್ರಸ್ತುತ ಅವರು ಮೈಸೂರಿನಲ್ಲಿ ಇರುವ ಕಾರಣ ಜಿ.ಪಿ.ಎ ಕೊಡುವ ಪ್ರಸಂಗ ಇರುವುದಿಲ್ಲ ಎಂದರೆ ಸರಿಯಲ್ಲ. ಅವರೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನೈಜ ಸಂಗತಿ ಗೊತ್ತಾಗುತ್ತದೆ ಎಂದು ಅವರು ಜಿ.ಪಿ.ಎ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ನನ್ನ ಹೆಂಡತಿಯ ಅಕ್ಕ. ಅವರು ಸ್ವಂತ ಅಕ್ಕ ತಂಗಿಯರು ಅಲ್ಲ ಎಂದರೆ ಚಿಕ್ಕಪ್ಪ- ದೊಡ್ಡಪ್ಪನ ಮಕ್ಕಳು ಎನ್ನುತ್ತಾರೆ. ಜಿ.ಪಿ.ಎ ನಲ್ಲಿ ಸದರಿ ರವರು ಚಿಕ್ಕಪ್ಪ- ದೊಡ್ಡಪ್ಪನ ಮಕ್ಕಳು ಎಂದು ಬರೆಸಿಲ್ಲ ಎಂದರೆ ಸರಿ. ಜಿ.ಪಿ.ಎ ಅನ್ನು ದಿಃ 03.09.2024 ರಲ್ಲಿ ಮೈಸೂರಿನ ವಕೀಲರ ಬಳಿ ಟೈಪ್ ಮಾಡಿಸಲಾಗಿರುತ್ತೆ. ಅದನ್ನು ನಾನೆ ಎಲ್ಲಾ ರೆಡಿ ಮಾಡಿಸಿದ್ದು ಎಂದರೆ ಸರಿಯಲ್ಲ, ವಕೀಲರೆ ಟೈಪ್ ಮಾಡಿಸಿದ್ದರು. ಸದರಿ ದಾಖಲೆ ಪತ್ರವನ್ನು ದಿಃ 08.10.2024 ರಂದು ಖರೀದಿ ಮಾಡಲಾಯಿತು. ನಾನು ನಿವೃತ್ತಿ ಹೊಂದಿದ ನಂತರ ಈ ರೀತಿ ಜಿ.ಪಿ.ಎ ಸೃಷ್ಟಿಸಿಕೊಂಡು ಸಾಕ್ಷಿ ಹೇಳಲು ರೂಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೈಸೂರಿನ

ನ್ಯಾಯಾಲಯಗಳಲ್ಲಿ ಜಿ.ಪಿ.ಎ ಆಧಾರದ ಮೇಲೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಈ ಕೇಸ್ ಗೆ ಸಂಬಂಧಿಸಿದಂತೆ 3 ದಾವೆಗಳು ಇದ್ದು ಅವುಗಳಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. ಜೊತೆಗೆ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ವಿಸ್ತೀರ್ಣ, ಸರ್ವೆ ನಂಬರ್ ಮತ್ತು ಚಕ್ಕುಬಂದಿ ತಿಳಿದುಕೊಂಡಿದ್ದೇನೆ. ನಾನು ದಾವಾ ಐಟಂ ನಂ. 2 ಮತ್ತು 3, ಸರ್ವೆ ನಂ. 149/2 ರಲ್ಲಿ 5 ಎಕರೆ 7 ಗುಂಟೆ, ಸರ್ವೆ ನಂ. 139/2 ರಲ್ಲಿ 1 ಎಕರೆ 8 ಗುಂಟೆ ಇವುಗಳ ಬಗ್ಗೆ ಮಾತ್ರ ತಿಳಿದುಕೊಂಡಿದ್ದೇನೆ. ಐಟಂ ನಂ. 1, 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಗ ಸೇರಿದ್ದು ಎಂದರೆ ಸರಿ. ಸದರಿ ಆಸ್ತಿಯ ಬಗ್ಗೆ ನಮ್ಮದು ಯಾವುದೆ ತಕರಾರು ಇಲ್ಲ. ನಿಡಿ. 12 ಅಗ್ರಿಮೆಂಟ್ ಐಟಂ ನಂ. 1 ಕ್ಕೆ ಸಂಬಂಧಿದಂತೆ ಅಗ್ರಿಮೆಂಟ್ ಆಗಿರುತ್ತದೆ. ಸರ್ವೆ ನಂ. 103/2 ರಲ್ಲಿ 2 ಎಕರೆ 18 ಗುಂಟೆ ಜಮೀನಿಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ನಿಡಿ. 12 ಅಗ್ರಿಮೆಂಟ್ ಸಂಬಂಧ ಚಂದ್ರಶೇಖರ ರವರು ಬದುಕಿದ್ದಾಗ ಏನಾದರೂ ದಾವೆ ಹಾಕಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಚಂದ್ರಶೇಖರ ರವರ ವ್ಯವಹಾರದ ಸಂಬಂಧ, ವೃತ್ತಿಗೆ ಸಂಬಂಧಿಸಿದಂತೆ ಅವರು ವೈಯಕ್ತಿಕ ಮಾಹಿತಿ ಗೊತ್ತಿರುತ್ತದೆ. ನಿಡಿ. 12 ಅಗ್ರಿಮೆಂಟ್ ಗೆ ಸಂಬಂಧಿಸಿದಂತೆ ಅವರು ಬದುಕಿದ್ದಾಗ ಯಾವುದೆ ದಾವೆ ಹಾಕಿಲ್ಲ ಎಂದರೆ ಸರಿ. ನಿಡಿ. 14 ರಲ್ಲಿ ದಿಃ 20.06.2011 ರಲ್ಲಿ ಪಡೆದ ಸಾಲ ಅಗ್ರಿಮೆಂಟ್ ಬಾಬ್ತು ಹಣ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆ ಅಗ್ರಿಮೆಂಟ್ ಮಾಡಿಕೊಂಡು ಅದನ್ನು ಕ್ರಯ ಮಾಡಿಕೊಡದಿದ್ದಾಗ ಸಾಲ ವಾಪಸ್ಸು ಕೊಡುತ್ತೇನೆ ಎಂದು ಆ ರೀತಿ ತೋರಿಸಿದ್ದಾರೆ ಎನ್ನುತ್ತಾರೆ.

ನಿಡಿ. 12 ದಾಖಲೆಗೆ ಸಂಬಂಧಿಸಿದಂತೆ ನಿಡಿ. 14 ರಲ್ಲಿ ಇರುವ ಒಕ್ಕಣೆ ಆಗಿರುತ್ತದೆ ಎಂದರೆ ಸರಿ. ನಿಡಿ. 14 ದಾಖಲೆಯನ್ನು ರಿಜಿಸ್ಟ್ರೇಶನ್ ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಆ ರೀತಿ ತೊಂದರೆ ಇರಲಿಲ್ಲ, ಆದರೆ ಮಾಡಿಕೊಂಡಿಲ್ಲ ಎನ್ನುತ್ತಾರೆ. ನಿಡಿ. 14 ರಲ್ಲಿ "ಗುತ್ತಿಗೆ ಬಾಬ್ತು ಹಣ" ಎಂಬ ಒಕ್ಕಣೆ ಇದ್ದು, ಅದು ಯಾವುದರ ಬಾಬ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರು ಕೊಡಬೇಕಾದ ಹಣ ಎಂದು

ನುಡಿಯುತ್ತಾರೆ. ನಿಡಿ. 14 ರ ದಾಖಲೆ ಬರೆಯುವಾಗ ನಾನು ಖುದ್ದಾಗಿ ಹಾಜರಾಗಿರಲಿಲ್ಲ ಅದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಹಾರ ಆದ್ದದ್ದು ನಮ್ಮ ಅಣ್ಣನ ಮನೆಯಲ್ಲಿ. ಸದರಿ ದಾಖಲೆಯಲ್ಲಿ "ಜಮೀನಿನ ಭೋಗ್ಯದ ಹಣ" ಎಂದು ಇದ್ದು, ಯಾವ ಜಮೀನಿಗೆ ಸಂಬಂಧಿಸಿದ ಭೋಗ್ಯದ ಹಣ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ದಾಖಲೆಯನ್ನು ನಾನು ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. ರೈತರೆಂಬ ಅಮಾಯಕರನ್ನು ಬಳಿಸಿಕೊಂಡು ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ. 2 ರ ದಾಖಲೆಯಲ್ಲಿ ಸರ್ವೆ ನಂ. 140 ರಲ್ಲಿ ಚನ್ನಪ್ಪ ಬಿನ್ ಸಿದ್ದಪ್ಪ ಮತ್ತು ಕೆ.ಸಿ ಮಹದೇವ್ವ ಬಿನ್ ಚನ್ನಪ್ಪ ಎಂದು ನಮೂದಾಗಿದೆ ಎಂದರೆ ಸರಿ. ಆದರೆ ಅವರು ನಮಗೆ ಕ್ರಯ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ. 3 ರ ದಾಖಲೆಯಲ್ಲಿ ಚನ್ನಪ್ಪ ಬಿನ್ ಸಿದ್ದಪ್ಪ ಪೌತಿಯ ಮೇರೆಗೆ ಕೆ.ಸಿ ಮಹದೇವ್ವ ಬಿನ್ ಚನ್ನಪ್ಪ ರವರ ಹೆಸರಿಗೆ ಪೌತಿ ಖಾತೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿ ನಮಗೆ ಕ್ರಯ ಆಗುವ ಮೊದಲು ಆ ರೀತಿ ಪೌತಿ ಖಾತೆ ಆಗಿರುತ್ತದೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಹಾಗೆ ನಮೂದು ಆಗಿರುವುದರಿಂದ ದಾವಾ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.